**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಇಂಧನ ಸಚಿವರ ಉತ್ತರ**

**ವಿಷಯ:** ಕನ್ನಡ ನಾಡುನುಡಿಗಳ ಅಭಿವೃದ್ಧಿಗಾಗಿ ಹುಟ್ಟಿಕೊಂಡ ಏಕೈಕ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಏಕೈಕ ವಿಶ್ವವಿದ್ಯಾಲಯ ಅದುವೇ ನಮ್ಮ "ಹಂಪಿ ಕನ್ನಡ ವಿಶ್ವವಿದ್ಯಾಲಯ" ಇದು ವಿಶೇಷ ಕಾನೂನಿನ ಅಡಿಯಲ್ಲಿ ಸ್ಥಾಪಿತವಾಗಿದೆ, ಈ ವಿಶ್ವವಿದ್ಯಾಲಯದ ಮಹತ್ವ ಅರಿತು ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಸಮರ್ಪಕವಾದ ಅನುದಾನ ಕೊರತೆಯ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯವು ತನ್ನ ವಿದ್ಯುತ್ ಬಿಲ್ ಪಾವತಿಗೂ ಹೆಣಗಾಡುತ್ತಿರುವುದು ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಭರವಸವಾಗಿದೆ.

ಈ ವಿಶ್ವವಿದ್ಯಾಲಯಕ್ಕೆ ಭೌತಿಕವಾಗಿ ಭದ್ರ ಬುನಾದಿಯನ್ನು ಹಾಕಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ|| ಚಂದ್ರಶೇಖರ ಕಂಬಾರ ಅವರು ಈ ವಿ.ವಿಯ ಕುರಿತು "ಕನ್ನಡ ವಿಶ್ವವಿದ್ಯಾಲಯ ಕೇವಲ ವಿದ್ಯೆಯನ್ನು ನೀಡುವುದು ಸೀಮಿತವಲ್ಲ; ವಿದ್ಯೆಯನ್ನು ಸೃಷ್ಟಿಸುವ ಕೇಂದ್ರವೆಂದು ಬಣ್ಣಿಸಿದ್ದಾರೆ. ಇಂತಹ ಮಹತ್ವದ ಪರಂಪರೆಯನ್ನು ಹೊಂದಿರುವ "ಹಂಸಿ ಕನ್ನಡ ವಿಶ್ವವಿದ್ಯಾಲಯಕ್ಕೆ" ಸರ್ಕಾರವು ಹೆಚ್ಚಿನ ಗಮನ ಹರಿಸುವ ಅವಶ್ಯಕತೆ ಇದೆ ಎಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಪ್ರಸ್ತುತ ವಿಶ್ವವಿದ್ಯಾಲಯಕ್ಕೆ ಅನುದಾನದ ಕೊರತೆಯಿಂದ ಸಂಶೋಧನಾ ಕೆಲಸಗಳಿಗ ಸಾಕಷ್ಟು ಹಿನ್ನಡೆಯಾಗುತ್ತಿರುವುದು ಒಂದೆಡೆಯಾದರೆ, ತಾತ್ಕಾಲಿಕ ಸಿಬ್ಬಂದಿ ವೇತನ, ಪ್ರಸ್ತುತ ಪ್ರಕಟಣೆ, ವಿದ್ಯಾರ್ಥಿ ವೇತನ, ಪ್ರೋತ್ಸಾಹಧನ ಸೇರಿದಂತೆ ಇತರ ಖರ್ಚು-ವೆಚ್ಚ ಸರಿದೂಗಿಸುವುದು ಸಹ ವಿಶ್ವವಿದ್ಯಾಲಯಕ್ಕೆ ಒಂದು ರೀತಿಯ ಸವಾಲಾಗಿದೆ ಎಂದು ಮಾಧ್ಯಮಗಳಲ್ಲಿ ಪಕಟವಾಗಿದೆ. ಹಾಗೂ ಪ್ರಸ್ತುತ ವಿಶ್ವವಿದ್ಯಾಲಯಕ್ಕೆ ಬಾಕಿ ಸೇರಿಸಿ ಬರೊಬ್ಬರಿ ಒಟ್ಟು 85.00 ಲಕ್ಷ ರೂ. ಗಳಷ್ಟು ವಿದ್ಯುತ್ ಬಿಲ್ ಇದೆ.

ಈ ವಿಷಯದ ಕುರಿತು ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ನಾಡೋಜ ಡಾ|| ಮಹೇಶ ಜೋಶಿ ರವರು ಸಹ ಮನವಿ ಮಾಡಿದ್ದಾರೆ. ಆದ್ದರಿಂದ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ ಸಮಸ್ತ ಕನ್ನಡಿಗರ ಧ್ವನಿಯಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅನುದಾನ ಬಿಡುಗಡೆ ಮಾಡುವ ಮೂಲಕ ಹಾಗೂ ಬಾಕಿ ಇರುವ ವಿದ್ಯುತ್ ಬಿಲ್ ಮನ್ನಾ ಮಾಡುವ ಮೂಲಕ ಕನ್ನಡ ಭಾಷೆ, ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯ ಸೇರಿದಂತೆ ಕನ್ನಡಿಗರ ಅಕ್ಷ ವಿಶ್ವಾಸ ಹೆಚ್ಚಿಸಬೇಕೆಂದು ಹಾಗೂ ಈ ಮೇಲಿನ ಎಲ್ಲ ಅಂಶಗಳನ್ನು ಪರಿಗಣಿಸಿ ವಿದ್ಯುತ್ ಬಿಲ್ ಮನ್ನಾ ಮಾಡಿ ಸದರಿ ವಿಶ್ವವಿದ್ಯಾಲಯವು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ಸರಿದೂಗಿಸುವಂತೆ ತಮ್ಮ ಮೂಲಕ ಕೋರುತ್ತೇನೆ.

* * * * *

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಹೊಸಪೇಟೆ ನಗರದ ವಿಭಾಗದಿಂದ ಹಂಪಿ ಕನ್ನಡ ವಿಶ್ವ ವಿದ್ಯಾಲಯಕ್ಕೆ KHT-1: KHT-2 ಮತ್ತು KHT-65 ಸ್ಥಾವರಗಳ ಮೂಲಕ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ. ಜೂನ್-2023 ರ ಅಂತ್ಯಕ್ಕೆ KHT-1ರ ಬಾಕಿ ರೂ.3204291/- KHT-2 ರ ಬಾಕಿ ರೂ. 4161148/- ಮತ್ತು KHT-65 ರ ಬಾಕಿ ರೂ. 844963/- ಹೀಗೆ ಒಟ್ಟು ರೂ 82,10,402 ವಿದ್ಯುತ್ ಬಿಲ್ ಬಾಕಿ ಇರುತ್ತದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು 09-06-2023 ರಂದು ಹೊರಡಿಸಿದ ಗುಲ್ಬರ್ಗಾ ವಿದ್ಯುಚ್ಚಕ್ತಿ ಸರಬರಾಜು ಕಂಪನಿಯ ಜಾಕಾತಿ ಆದೇಶ 2021 ರಲ್ಲಿ ಕಂಡಿಕೆ 4.2.10 ಪುಟ ಸಂಖ್ಯೆ 58, 59 ರಲ್ಲಿ (ಪ್ರತಿಗಳನ್ನು ಲಗತ್ತಿಸಿದೆ) ಸರ್ಕಾರಿ ಇಲಾಖೆಗಳ ಬಿಲ್ ಮನ್ನಾ ಮಾಡುವುದರಿಂದ ಇತರೆ ಪ್ರಾಮಾಣಿಕ ಗ್ರಾಹಕರುಗಳ ಮೇಲೆ ಹೊರೆ ಬೀಳುವುದರಿಂದ ಮತ್ತು ಈಗಾಗಲೇ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಸರ್ಕಾರಿ ಇಲಾಖೆಗಳ ಬಿಲ್ ಮನ್ನಾ ಮಾಡುವುದಕ್ಕೆ ಅನುಮೋದನೆ ಮಾಡಿರುವುದಿಲ್ಲ ಮತ್ತು ಬಿಲ್ಲನ್ನು ವಸೂಲಾತಿ ಮಾಡಲು ಸೂಚಿಸಿರುತ್ತದೆ.

ಈ ಮೊದಲು ದಿನಾಂಕ: 19-11-2022 ರಂದು ವಿದ್ಯುತ್ ಮನ್ನಾ ಮಾಡಲು ಬರುವುದಿಲ್ಲವೆಂದು ಮಾನ್ಯ ಕುಲಪತಿಗಳು ಕನ್ನಡ ವಿಶ್ವವಿದ್ಯಾಲಯ ಹಂಪಿ ರವರಿಗೆ ಪತ್ರದ ಮುಖೇನ ತಿಳಿಸಲಾಗಿದೆ. (ಪ್ರತಿಯನ್ನು ಲಗತ್ತಿಸಿದೆ)

ಸಂಖ್ಯೆ: ಎನರ್ಜಿ 161 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು